# ನಿನ್ನ ತೀರ್ಪೇನು?

## ಯೇಸುವಿನ ವಿಚಾರಣೆಗಳು,[1] ಒಂದು ನಿಕಟ ನೋಟ

ಯೇಸುವಿನ ರಕ್ತದ ಮೂಲಕ ರಕ್ಷಿಸಲ್ಪಟ್ಟ ನಮ್ಮಂಥವರು ಆತನ ಬಾಧೆಗಳಿಗಾಗಿ ನೋವಿನಿಂದ, ಆದರೆ ರಕ್ಷಣೆಗಾಗಿ ಸಂತೋಷದಿಂದ ಹೀಗೆ ಆತನ ಶಿಲುಬೆಯೆಡೆಗೆ ಮಿಶ್ರಭಾವದಿಂದ ನೋಡುವವರಾಗಿದ್ದೇವೆ. ಮೊದಲನೆಯ ಶತಮಾನದಲ್ಲಿ, ಪ್ರತಿಯೊಬ್ಬ ಮನುಷ್ಯನೂ ಕ್ರೂಜೆಯೆಡೆಗೆ ನೋಡುತ್ತಿರುವಾಗ, ಅಲ್ಲಿ ಆತನು ವೇದನೆಯನ್ನು ಮತ್ತು ಅವಮಾನವನ್ನು ಬಿಟ್ಟು ಬೇರೇನನ್ನು ನೋಡುತ್ತಿರಲಿಲ್ಲ (ನೋಡಿರಿ 1 ಕೊರಿಂಥ 1:18; ಗಲಾತ್ಯ 3:13; ಇಬ್ರಿಯ 12:2). ಆದಿ ಸೌವಾರ್ತಿಕನು ಎದುರಿಸಬಹುದಾದ ಒಂದು ದೊಡ್ಡ ಸವಾಲೆಂದರೆ ರಕ್ಷಕನಾದವನು ರೋಮನ್ನರ ಕ್ರೂಜೆಯ ಮೇಲೆ ಮರಣಿಸಿದ ವಿಚಾರದ ಬಗ್ಗೆ ಆಳವಾಹಿ ಕೂತಿರುವಂಥ ಪೂರ್ವಾ ಗ್ರಹದ ಭಾವನೆಯನ್ನು ಹತ್ತಿಕ್ಕುವದೇ ಆಗಿತ್ತು. ಪೌಲನು ಈ ಸವಾಲಿನ ಬಗೆಗೆ ಬರೆಯುತ್ತಾ, "ನಾವಾದರೋ ಶಿಲುಬೆಗೆ ಹಾಕಲ್ಪಟ್ಟ ... ಕ್ರಿಸ್ತನ ಸಂಗತಿಯು ಯೆಹೂದ್ಯರಿಗೆ ವಿಘ್ನವೂ ಅನ್ಯಜನರಿಗೆ ಹುಚ್ಚುಮಾತು ಆಗಿದೆ" ಎನ್ನುತ್ತಾನೆ (1 ಕೊರಿಂಥ 1:23).

ಯೇಸು ಅಪರಾಧಿಯೆಂದು ಆಪಾದಿಸಲ್ಪಟ್ಟು ಮರಣಿಸಿದ ವಾಸ್ತವತೆಯು ಕೆಲವರ ನಂಬಿಕೆಗೆ ಇನ್ನೂ ಅಡ್ಡಿಯಾದದ್ದಾಗಿದೆ. ಯೇಸುವಿಗೆ ಯೆಹೂದಿಗಳು ಮತ್ತು ರೋಮನ್ನರಿಬ್ಬರೂ ಮರಣದಂಡನೆಯನ್ನು ನೀಡಿದ್ದನ್ನು ಕ್ರೈಸ್ತತ್ವದ ಎದುರಾಳಿಗಳು ಎತ್ತಿತೋರುವವರಾಗಿದ್ದಾರೆ. ಜಗತ್ತಿನ ರಕ್ಷನಾದವನೊಬ್ಬನನ್ನು ಆತನ ಕಾಲದ ಧಾರ್ಮಿಕ ಮತ್ತು ರಾಜಕೀಯ ಅಸ್ತಿತ್ವಗಳೆರಡರಿಂದಲೂ ದೂಷಿಸಲ್ಪಟ್ಟನು ಎಂಬುದನ್ನು ಯೋಚಿಸುವುದು ಹಾಸ್ಯಸ್ಪದವಾದದ್ದು ಎಂದು ಅವರು ಸೂಚಿಸುವವರಾಗಿದ್ದಾರೆ. ಈ ಪ್ರತಿರೋಧಗಳಿಗೆ ಉತ್ತರಕೊಡುತ್ತಾ, ಕ್ರಿಸ್ತನ ವಿಚಾರಣೆಯ ಸಮಯದ ಆರಂಭದಲ್ಲಿ ನಿಜವಾಗಿ ಏನು ನಡೆಯಿತು ಎಂಬುದನ್ನು ಸ್ಪಷ್ಟವಾಗಿ ಅರಿತುಕೊಳ್ಳುವ ಅವಶ್ಯಕತೆಯು ನಮಗಿದೆ.[2] ಒಬ್ಬ ನಿರಪರಾಧಿಯು ಮರಣಕ್ಕೆ ಒಪ್ಪಿಸಿಕೊಡಲ್ಪಡುವುದಕ್ಕೆ ಹೇಗೆ ಸಾಧ್ಯವಾಯಿತು ಎಂಬುದನ್ನು ಅರಿತುಕೊಳ್ಳುವ ಅವಶ್ಯಕತೆಯು ನಮಗಿದೆ.

ಈ ಪ್ರಸಂಗದಲ್ಲಿ, ಯೇಸುವಿನ ಯೆಹೂದಿ ಮತ್ತು ರೋಮನ್ನ ವಿಚಾರಣೆಗಳ ನಿರ್ಧಿಷ್ಟ ಅಂಶದ ಮೇಲೆ ನಾವು ಕೇಂದ್ರಿಕರಿಸುವಾ:[3] ಕರ್ತನನ್ನು ವಿಚಾರಗೆ ಒಳಪಡಿಸಿದಂಥವರ ಉದ್ದೇಶವನ್ನು ನಾವು ಪರೀಕ್ಷಿಸುವಾ. ಮೂಲಕ ಸಾಧಿಸುವ ಬದಲಾಗಿ ಅದು ಆತನೇ ಎಂದು ಅವರು ಸಾಧಿಸಿದರು. ಪ್ರಸಂಗವು ಮುಕ್ತಾಯಗೊಳ್ಳುವ ಮುನ್ನ ಪ್ರಸ್ತುತದ ಅನ್ವಯವನ್ನು ನಾವು ಮಾಡುವಾ: ಯೇಸು ಇನ್ನೂ ಈಗಲೂ ಕೂಡಾ ನಿಮ್ಮ ಹೃದಯದ ವಿಚಾರಣೆಯಲ್ಲಿ ಇದ್ದಾನೆ; ಆತನ ಬಗ್ಗೆ ಏನನ್ನು ನಂಬಬೇಕು ಎಂದು ನೀವಿನ್ನು ಯೋಚಿಸಿರಲಿಕ್ಕಿಲ್ಲ: ದೋಷವೋ ಅಥವಾ ನಿರಪರಾಧವೋ? ಆತನು ಅಪರಾಧಿಯೋ ಅಥವಾ ಕ್ರಿಸ್ತನೋ? ಆತನು ಕಾನೂನನ್ನು ಮುರಿಯವವೋ ಅಥವಾ ಕರ್ತನೋ? ನಿಮ್ಮ ತೀರ್ಪನ್ನು ಕೊಡುವ ಸವಾಲು ನಿಮ್ಮ ಮುಂದಿದೆ.

### ಮೊದಲ ಶತಮಾನದಲ್ಲಿನ ಯೇಸುವಿನ ವಿಚಾರಣೆ

#### ಪೂರ್ವಗ್ರಹವು ಮೇಲುಗೈಯಾಯಿತು (ಮಹಾಸಭೆಯಲ್ಲಿ)

ನಾವು ಮಹಾಸಭೆಯ ಮುಂದಿನ ಯೇಸುವಿನ ವಿಚಾರಣೆಯೊಂದಿಗೆ ಪ್ರಾರಂಭಿಸುವಾ.

ಯೆಹೂದಿ ನಾಯಕರು ನ್ಯಾಯವನ್ನು ಎದುರು ನೋಡುತ್ತಿರಲಿಲ್ಲ, ಆದರೆ ಸಮರ್ಥನೆ, ವಾರದ ಮೊದಲು ತಲುಪಿದ ನಿರ್ಧಾರದ ಸಮರ್ಥನೆ (ಯೋಹಾನ 11:47-53, 57) ಶಾಸ್ತ್ರಿಯ ಮರಣದಂಡನೆಯ ತೊಡಕಿನ ಅಡಿಯಲ್ಲಿ ಕೊಲ್ಲುವುದಕ್ಕಾಗಿ ಅಪರಾಧಿನ್ನಾಗಿಸುವಂಥ ಯೇಸುವನ್ನು (ಯೆಹೂದಿಗಳಿಂದ) ನೋಡುಕೊಳ್ಳುವಿಕೆಯಾಗಿತ್ತು ಎಂದು ಹಾರ್ವರ್ಡ್[4] ಪ್ರೊಫೆಸರ್ (ಸಿಮೋನ) ಗ್ರೀನ್‌ಲೀಫ ಮತ್ತು ಜನಪ್ರಿಯ ಅಮೇರಿಕನ್ ನ್ಯಾಯಾಧಿಕಾರಿಯು (1846) ಭಾವಿಸುವವರಾಗಿದ್ದಾರೆ.[5]

ಯೇಸುವಿನ ಯೆಹೂದಿ ವಿಚಾರಣೆಯು ವಿನೋದಕ್ಕಾಗಿ ಇದ್ದದ್ದು ಎಂದು ನ್ಯಾಯಬದ್ಧ ಸಂಭವಿಸುವಿಕೆಯ ಬಗ್ಗೆ ಅಲ್ಪಜ್ಞಾನವಿರುವಂಥ ನಾವೂ ಕೂಡಾ ತಿಳಿಯುವುದು ನಿಶ್ಚಿತವಾದದ್ದೇ: “ಆಗ ಮಹಾಯಾಜಕರೂ ಹಿರಿಯ ಸಭೆಯವರೆಲ್ಲರೂ ಯೇಸುವನ್ನು ಕೊಲ್ಲಿಸಬೇಕೆಂದು ಆತನ ಮೇಲೆ ಸುಳ್ಳು ಸಾಕ್ಷಿಯನ್ನು ಹುಡುಕಿದರು. ಆದರೆ ಬಹು ಮಂದಿ ಸುಳ್ಳುಸಾಕ್ಷಿಗಳು ಬಂದು ನಿಂತರೂ ಏನೂ ಸಿಕ್ಕಲಿಲ್ಲ. ಕಡೆಗೆ ಇಬ್ಬರು ಸಾಕ್ಷಿಗಳು ಮುಂದೆ ಬಂದರು” ಎಂದು ಮತ್ತಾಯನು ಕಾಯಫ ಮತ್ತು ಆತನ ಜೊತೆಯವರ ಮೂಲವನ್ನು ಹೊರಹಾಕುತ್ತಾನೆ (ಮತ್ತಾಯ 26:59, 60). ಸುಳ್ಳು ಸಾಕ್ಷಿಗಳ ಪಾಪದ ಬಗೆಗೆ ಮೋಶೆಯ ಧರ್ಮಶಾಸ್ತ್ರವು ಸ್ಪಷ್ಟವಾಗಿ ಇರುವುದಾಗಿದೆ (ವಿಮೋಚನಕಾಂಡ 20:16; ನೋಡಿರಿ ಧರ್ಮೋಪದೇಶಕಾಂಡ 19:15-21).

ಮಹಾಸಭೆಯ ಅಪ್ರಾಮಾಣಿಕತೆಯೂ ಕೂಡಾ ಅವರು ಯೇಸುವನ್ನು ಪಿಲಾತನ ಮುಂದೆ ತರುವಲ್ಲಿ ಒಂದು ಸಾಕ್ಷಿಯಾಗಿತ್ತು. ಅವರು ಆತನ ಮೇಲೆ ದೇವದೂಷಣೆಯ ಆರೋಪವನ್ನು (ಮತ್ತಾಯ 26:65, 66) ಬಂಡಾಯದ ರಾಜಕೀಯ ಆರೋಪವನ್ನು (ಲೂಕ 23:2) ಹೊರೆಸಿದ್ದರು. ಮುಂದೆ ಪಿಲಾತನ ಮುಂದೆ ಆರೋಪ ಮಾಡಲು ಯೆಹೂದಿ ವಿಚಾರಣೆಯಲ್ಲಿ ಯಾವುದೇ ಆರೋಪವನ್ನು ಮಂಡನೆ ಮಾಡಲು ಯಾವುದೇ ಸಾಕ್ಷಿಯು ಇಲ್ಲವಾಗಿ ಹೋಯಿತು. ರೋಮನ್ ವಿಚಾರಣೆಯ ಉದ್ದಕ್ಕೂ (ನಂತರದಲ್ಲಿ ಚರ್ಚಿತವಾಗುವಂತಹ) ಮಹಾಸಭೆಯ ನಡೆಸುವಿಕೆಯು ಸಂಪೂರ್ಣವಾಗಿ ನ್ಯೂನ್ಯತೆಗಳಿಂದ ಕೂಡಿದ್ದಾಗಿತ್ತು:

- ಅವರು ಯೇಸುವನ್ನು ದೇವದೂಷಣೆಯ ಆಪಾದನೆಯ ಮೇರೆಗೆ ದೂಷಿಸಿದರು, ಮತ್ತು ಆಗ ಇದರ ಪರಿಣಾಮವಾಗಿ ಯೆಹೂವನ ಅವರ ಅರಸನು ಎಂಬುದನ್ನು ನಿರಾಕರಿಸಿದರು (ನೋಡಿರಿ ಯೋಹಾನ 19:15) - ಇದೊಂದು ದೇವದೂಷಣೆಯ ವಿಚಾರ.
- ಯೇಸು ದೊಂಬಿಯನ್ನು ಪ್ರೇರೇಪಿಸುವ ವ್ಯಕ್ತಿ (ನೋಡಿರಿ ಲೂಕ 23:5) ಮತ್ತು ಪಿಲಾತನ ಮೇಲೆ ಒತ್ತಡ ತರುವಂತ ದೊಂಬಿಯನ್ನು ಪುಸಲಾಯಿಸುವವನು ಎಂದು ಅವರು ಯೇಸುವನ್ನು ನಿಂದಿಸಿದರು (ಮತ್ತಾಯ 27:24).
- ಯೇಸುವು ಬಿಡುಗಡೆ ಹೊಂದಬಾರದು ಯಾಕೆಂದರೆ ಆತನು ಒಳಸಂಚಿನ ದ್ರೋಹ ದಲ್ಲಿದ್ದಾನೆ ಎಂದು ಅವರು ಹೇಳಿದರು (ಲೂಕ 23:2) ಮತ್ತು ಒಳಸಂಚಿನ ದೋಷ ದಲ್ಲಿರುವವನನ್ನು ಬಿಡುಗಡೆಯ ಮಾಡುವ ಬೇಡಿಕೆಯನ್ನು ಇಟ್ಟರು (ಮಾರ್ಕ 15:7, 11).

ಹೇಗೂ, ಆ ಸಮಸ್ಯೆಯು ಕೇವಲ ಯೆಹೂದಿ ನ್ಯಾಯ ಪದ್ಧತಿಯದು ಮಾತ್ರ ಆಗಿರಲಿಲ್ಲ;ಡ ಆ ನಿರ್ಣಾಯಕ ಶುಕ್ರವಾರದಂದು ನ್ಯಾಯವನ್ನು ನಿರ್ವಹಿಸುತ್ತಿದ್ದವರ ಹೃದಯದ ದೋಷವು ಅದಾಗಿತ್ತು ಎಂದು ತಿಳಿಯಿರಿ. ಯೆಹೂದಿ ನ್ಯಾಯ ಪದ್ಧತಿಯು ಬಲು ಸಹೃದಯತೆಯುಳ್ಳದ್ದು ಎಂದು ಜಗತ್ತಿನಲ್ಲಿಯೇ ಗುರುತಿಸಲ್ಪಟ್ಟಿದ್ದು ಒಬ್ಬ ಇಸ್ರಾಯೇಲ್ಯನ ಜೀವಿತವು ಎಷ್ಟು ಅಮೂಲ್ಯ ವಾಗಿತ್ತೆಂದರೆ ಆತನ ಜೀವಿತ್ಯವನ್ನು ರಕ್ಷಿಸಲು ಪ್ರತಿಯೊಂದು ತೀರ್ಪನ್ನು ನ್ಯಾಯಬದ್ಧವಾದ ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕಾಗಿತ್ತು. ಎರಡನೆಯ ಶತಮಾನದಲ್ಲಿ,

ಯೆಹೂದಿ ಸಂಪ್ರದಾಯದ ರೀತಿಗಳು *The Mishnah.*[6] ಎಂಬ ಗ್ರಂಥದಲ್ಲಿ ಬರೆದಿಡಲ್ಪಟ್ಟಿದ್ದವು. ಯೇಸು ವಿಚಾರಣೆಗೆ ಒಳಗಾದಾಗ ಹೆಚ್ಚಾದಂಥ ಕಾಯಿದೆಗಳ ಬಗ್ಗೆ ಕೆಲ ಪ್ರಶ್ನೆಗಳಿವೆ, ಆದರೆ ಆಸಮಯದಲ್ಲಿ, ನ್ಯಾಯಬದ್ಧ ನ್ಯಾಯ ನಿರ್ಣಾಯಕರು ಈ ಕೆಳಗಿನವುಗಳನ್ನು ಅನುಸರಿಸಬಹುದಿತ್ತು ಎಂದು ಅನೇಕರು ನಂಬುವವರಾಗಿದ್ದಾರೆ:

- ಮರಣದಂಡನೆಯಂತಹ ಪ್ರಕರಣಗಳು ಕೇವಲ ದಿನದ ಆರಂಭದಲ್ಲಿ ವಿಚಾರಣೆಯಾಗಬೇಕು (*Mishnah*, Sanhedrin 4.1). ಇದು ಮಂಕಾದ ತೀರ್ಪಿನಿಂದ ಆಗುವ ದಣಿವನ್ನು ತಪ್ಪಿಸುವುಂದಾಗಿತ್ತು.
- ಆತನನ್ನು ದೋಷದಲ್ಲಿ ಕಂಡುಕೊಳ್ಳುವ ಮಾರ್ಗವನ್ನು ಹುಡುಕುವ ಬದಲು ಆರೋಪಿಯನ್ನು ಬಿಡಿಸಲು ನ್ಯಾಯಾಧೀಶರು ಅನೂಚಾನವಾಗಿ ಮಾರ್ಗವನ್ನು ಕಂಡುಹಿಡಿಯುತ್ತಿದ್ದರು (ನೋಡಿರಿ *Mishnah*, Sanhedrin 4.1ä 4.5ä 5.4).
- ಮರಣದಂಡನೆಯ ಪ್ರಕರಣದಲ್ಲಿ ಒಂದು ವಿರೋಧವಾದ ಮತವು ಆ ತಿಳುವಳಿಕೆಯನ್ನು ರದ್ದು ಮಾಡಬಹುದಾಗಿತ್ತು. (*Mishnah*, Sanhedrin 4.1) ಒಂದು ಅವಿರೋಧವಾದ ಮತವು ಯೋಗ್ಯಜನರ ಸಮಿತಿಯ ನಿರ್ಧಾರವನ್ನು ಸೂಚಿಸುವ ಬದಲು ಜನರ ಗುಂಪಿನ ಕಾರ್ಯವನ್ನು ಸೂಚಿಸುವದಾಗಿತ್ತು.
- ಮಹಾಸಭೆಯು ಆ ವ್ಯಕ್ತಿಯನ್ನು ತಪ್ಪಿನಲ್ಲಿ ಕಂಡುಕೊಳ್ಳುವುದಿಲ್ಲ ಮತ್ತು ನಂತರ ಅದೇ ದಿನ ಆತನಿಗೆ ಮರಣದಂಡನೆಯನ್ನು ಕೊಡುವುದಾಗಿತ್ತು (*Mishnah*, Sanhedrin 4.1ä 5.5). ಅವರು ಮನೆಗೆ ಹೋಗಬಹುದಿತ್ತು ಮತ್ತು ತಾವು ಕೊಟ್ಟಂತಹ ತೀರ್ಪಿನ ಬಗೆಗೆ ಯೋಚಿಸಬಹುದಿತ್ತು.
- ವಿವರಿಸುವಂತಹ ಮಹಾಯಾಜಕರು, ಈ ಪ್ರಕರಣದ ಬಗ್ಗೆ ತನ್ನ ಅಭಿಪ್ರಾಯದ ಧ್ವನಿಯನ್ನು ಎತ್ತವ ಹಾಗಿರಲಿಲ್ಲ ಯಾಕೆಂದರೆ ಆತನ ಪ್ರಭಾವವು ಎಷ್ಟಿತ್ತೆಂದರೆ ಇದು ಆತನಿಗಿಂತ ಕಿರಿಯ ಸದಸ್ಯರಿಗೆ ತಪ್ಪಾದ ಸಂದೇಶವನ್ನು ಕೊಟ್ಟಂತಾಗುತಿತ್ತು (ನೋಡಿರಿ *Mishnah*, Sanhedrin 4.2).[7]

ಯೇಸುವಿನ ಯೆಹೂದಿ ವಿಚಾರಣೆಯು ಈ ಮೂಲಭೂತವಾದ ಅಂಶಗಳನ್ನು ತೊಡೆದುಹಾಕಿತು:

- ಆತನು ರಾತ್ರಿಯಲ್ಲಿಯೇ ವಿಚಾರಣೆಗೆ ಒಳಗಾದನು ಮತ್ತು ತಪ್ಪಿತಸ್ಥನೆಂದು ಕಂಡುಹಿಡಿಯಲ್ಪಟ್ಟನು (ಮತ್ತಾಯ 26:57, 66; 27:1).
- ಆತನನ್ನು ನಿರಪರಾಧಿ ಎಂದು ನಿರ್ಣಯಿಸುವಲ್ಲಿ ನ್ಯಾಯಾಧೀಶರಿಗೆ ಯಾವ ಆಸಕ್ತಿಯೂ ಇರಲಿಲ್ಲ, ಆದರೆ ಆತನಲ್ಲಿ ತಪ್ಪನ್ನು ಕಾಣುವ ಆಸಕ್ತಿಯು ಅವರಲ್ಲಿ ಇತ್ತು (ಮತ್ತಾಯ 26:59).
- ಯೇಸುವಿನ ಬಗೆಗೆ ಮಹಾಸಭೆಯ ಮತವು ಪ್ರತ್ಯಕ್ಷವಾಗಿ ಅವಿರೋಧವಾಗಿಯೇ ಇತ್ತು (ಮಾರ್ಕ 14:64; ಲೂಕ 22:70, 71; ನೋಡಿರಿ ಮತ್ತಾಯ 27:1; ಮಾರ್ಕ 15:1; ಲೂಕ 23:1).[8]
- ತೀರ್ಪು ಮತ್ತು ಮರಣದಂಡನೆ ಅದೇ ರಾತ್ರಿ ಕೊಡಲ್ಪಟ್ಟವು (ಮತ್ತಾಯ 26:65, 66; 27:1).
- ಹಿರಿಯಯಾಜಕನು ಮೊದಲು ತನ್ನ ತೀರ್ಪನ್ನು ಹೇಳಿದನು ಮತ್ತು ಇದನ್ನು ದೃಢೀಕರಿಸಲು ಉಳಿದವರನ್ನು ಉತ್ತೇಜಿಸಿದನು (ಮತ್ತಾಯ 26:65, 66).

ಯೇಸುವಿನ ಯೆಹೂದಿ ವಿಚಾರಣೆಯ ಸತ್ಯವೇದಿಯ ವಿವರಣೆಗಳು ವಿಶ್ವಸನೀಯವು ಎಂದು ಒಪ್ಪಿತವಾದದ್ದಾದರೆ,[9] ನ್ಯಾಯಬದ್ಧವಾದದ್ದು ಎಂದು ಕಂಡುಬಂದಿದ್ದರೆ[10] ಕೇವಲ ಎಷ್ಟು

ಕಂಡು ಬಂದಿರಬಹುದು[11] ಎಂಬುದರಲ್ಲಿ ಯಾವ ಪ್ರಶ್ನೆಯೂ ಇಲ್ಲ. ಅಲ್ಲಿ ಸೂಚಿತವಾದಂಥ ಸೇರಿಸಲ್ಪಟ್ಟವುಗಳಲ್ಲಿ ಇತರರನ್ನೂ ಕೂಡಾ ಆ ಪಟ್ಟಿಯಲ್ಲಿ ಸೇರಿಸಬಹುದಾಗಿದೆ:[12]

- ಆ ವಿಚಾರಣೆಯು ಅಯೋಗ್ಯವಾಗಿ ಮಹಾಯಾಜಕನ ಮನೆಯಲ್ಲಿ ಒಪ್ಪಿಸಲ್ಪಟ್ಟಿತು (*Mishnah,* Sanhedrin 11:2).
- ಆ ವಿಚಾರಣೆಯು ಹಬ್ಬದ ದಿವಸ ನಡೆಸಲ್ಪಟ್ಟಿತು (*Mishnah,* Sanhedrin 4:1).
- ಯೇಸು ದೇವದೂಷಣೆಯ ಮಾತನಾಡಿದನು ಎಂಬ ಆಪಾದನೆಯ ನಿಮಿತ್ತ ಖಂಡನೆಗೆ ಒಳಗಾದನು, ಆದರೆ ಆ ಆತನ ಹೇಳಿಕೆಯು ಯೆಹೂದಿ "ದೇವ ದೂಷಣೆಯ" ನ್ಯಾಯಬದ್ಧ ಅಂಶಗಳನ್ನು ನೀಗಿಸುವುದಾಗಿರಲಿಲ್ಲ. ನ್ಯಾಯಬದ್ಧವಾದ ರಕ್ಷಣೆಯನ್ನು ಒದಗಿಸಲು ರಬ್ಬಿಗಳು ವಾಕ್ಯದ ಕಿರಿದಾದ ವ್ಯಾಖೆಯನ್ನು ಯೋಜನೆಗಳನ್ನು ರೂಪಿಸುವವರಾಗಿದ್ದರು ಧರ್ಮಶಾಸ್ತ್ರದ ಪ್ರಕಾರ "ದೇವದೂಷಣೆಯು" ದೇವರರನ್ನು ಶಪಿಸುವುದನ್ನು ಸೂಚಿಸುವುದಾಗಿದೆ (ಯಾಜಕಕಾಂಡ 24:15, 16); ರಬ್ಬಿಗಳ ಪ್ರಕಾರ, ದೇವದೂಷಣೆಯನ್ನು ಮಾಡುವವನು ದೇವರ ಹೆಸರನ್ನು ಪ್ರತ್ಯೇಕವಾಗಿ ಉಚ್ಚರಿಸುವ ದೋಷದಲ್ಲಿ ಇರುವವನಾಗಿದ್ದಾನೆ (*Mishnah,* Sanhedrin 7:5).

ತಿರುಗಿ ನಾನು ಹೇಳುವುದೇನೆಂದರೆ ಸಮಸ್ಯೆಯು ಯೆಹೂದಿ ನ್ಯಾಯಪದ್ಧತಿಯಲ್ಲಿ ಇರಲಿಲ್ಲ, ಆದರೆ ಅದು ಆಡಳಿತಗಾರರ ಮೇಲೆ ಇತ್ತು. ಯೇಸು ಯೆಹೂದಿಗಳಿಂದ ವಿಚಾರಣೆಗೆ ಒಳಗಾಗಲಿಲ್ಲ ಮತ್ತು ತಪ್ಪಿತಸ್ಥನೆಂದು ಕಂಡುಬರಲಿಲ್ಲ. ಬದಲಾಗಿ ಆತನು ತಪ್ಪಿತಸ್ಥನೆಂದು ಕಂಡುಬಂದನು ಮತ್ತು ವಿಚಾರಿಸಲ್ಪಟ್ಟನು. ಮಹಾಸಭೆಯ ಮುಂದಿನ ಯೇಸುವಿನ ವಿಚಾರಣೆಯ ಸುವಾರ್ತೆಯ ವಿವರಣೆಯ ಯಾವುದೇ ಪಕ್ಷಪಾತವಿಲ್ಲದ ಓದುವಿಕೆಯಲ್ಲಿ "ಯಾವುದೇ ತಪ್ಪಿಲ್ಲ" ಎಂಬ ತೀರ್ಪನ್ನು ಕೊಡುವುದಾಗಿದೆ!

**ರಾಜಕೀಯವು ಮೇಲುಗೈ ಪಡೆಯಿತು: ಪಿಲಾತನು**

ನಾವೀಗ ರೋಮನ್ ವಿಚಾರಣೆಯತ್ತ ಸಾಗುವ. ಪಿಲಾತನ ಮುಂದಿನ ಯೇಸುವಿನ ವಿಚಾರಣೆಯು ರೋಮದ ನ್ಯಾಯಾಸನದಲ್ಲಿ ನಡೆಯುವಂತಹ ಕ್ರಮಬದ್ಧವಾದ ಅಭ್ಯಾಸ ವಾಗಿತ್ತು. ನ್ಯಾಯಪರತೆಯು ರೋಮನ್ ಚಕ್ರಾಧಿಪತ್ಯಕ್ಕೆ ಪ್ರಮುಖವಾಗಿತ್ತು: "ಆಕಾಶವು ಕಳಚಿದ್ದರೂ ಕೂಡಾ ನ್ಯಾಯಪರತೆ ಆಗಲೇಬೇಕು ಎಂಬುದು ರೋಮನ್ನರ ಉದ್ದೇಶವು ಆಗಿತ್ತು."[13] ಇಂಥ ವಿಷಯಗಳಲ್ಲಿ ಜ್ಞಾನವಿದ್ದವರು "ಪಿಲಾತನ ಮುಂದಿನ ಕ್ರಿಸ್ತನ ವಿಚಾರಣೆಯು ದೇಶಾಧಿಪತಿಯ ಸಾಮಾನ್ಯವಾಗಿ ಎಲ್ಲಾ ಪ್ರಾಂತಿಯ ವಿಚಾರಣೆಯ ಅಂಶಗಳನ್ನು ಹೊಂದಿದ ತಿಳುವಳಿಕೆಯ (ವಿಚಾರಣೆ) ಆಗಿತ್ತು" ಎಂದು ನಮಗೆ ಹೇಳುವುದಾಗಿದೆ.[14] ಮೂಲ ಪದ್ಧತಿಗಳು ಈ ರೀತಿಯಲ್ಲಿ ಇರುವುದಾಗಿದೆ:

- ಆ ಪ್ರಕರಣವನ್ನು ವಿಚಾರಣೆ ಮಾಡುವಲ್ಲಿ ದೇಶಾಧಿಪತಿಯು ಜವಾಬ್ದಾರನಾಗಿದ್ದಾನೆ: ಅಲ್ಲಿ ಯಾವ ನ್ಯಾದರ್ಶಿಗಳು ಇರುವುದಿಲ್ಲ.
- ದೇಶಾಧಿಪತಿಯು ಆರೋಪವನ್ನು ಕೇಳಬೇಕು.
- ದೇಶಾಧಿಪತಿಯು ಆರೋಪಿಯನ್ನು ವಿಚಾರಣೆ ಮಾಡಬೇಕು.
- ತನಗೆ ಸಲಹೆಯು ಅವಶ್ಯವೆನಿಸಿದ್ದಾದರೆ ಸಲಹೆಗಾರನನ್ನು ಆತನು ಕರೆಯ ಬಹುದು.
- ವಿಚಾರಣೆಯು ಮುಗಿದ ಮೇಲೆ, ದೇಶಾಧಿಪತಿಯು ನ್ಯಾಯಾಸನದ ಮೇಲೆ ಕೂತುಕೊಳ್ಳಬೇಕು ತೀರ್ಪನ್ನು ಕೊಡಬೇಕು. ನ್ಯಾಯಾಸನದಿಂದ

ಮರಣದಂಡನೆಯು ಘೋಷಿತವಾಗಬೇಕಾದರೆ ಮ್ಯಾಜಿಸ್ಟ್ರೇಟರ್‌ಗಳಿಗೆ ರೋಮನ್ ಕಾನೂನಿನ ಅವಶ್ಯಕತೆಯು ಇರುವುದಾಗಿದೆ.[15]

ಯೇಸುವಿನ ರೋಮನ್ನರ ವಿಚಾರದಲ್ಲಿನ ಆರಂಭಿಕ ಹಂತದಲ್ಲಿ ಈ ರೀತಿಯು ಅನುಸರಿಸಲ್ಪಟ್ಟಿತು:

- ಯೇಸು ಪಿಲಾತನಿಗೆ ಒಪ್ಪಿಸಲ್ಪಟ್ಟನು (ಮತ್ತಾಯ 27:2; ಮಾರ್ಕ 15:1; ಲೂಕ 23:1); ವಿಚಾರಣೆಯ ಆಸಕ್ತಿಗೆ ದೇಶಾಧಿಪತಿಯೊಬ್ಬನೇ ಜವಾಬ್ದಾರಿನಾಗಿದ್ದನು.
- ಯೆಹೂದಿ ನಾಯಕರು ಪಿಲಾತನಿಗೆ ತಮ್ಮ ಆಪಾದನೆಯನ್ನು ಮಾಡಿದರು (ಯೋಹಾನ 18:29, 30; ಲೂಕ 23:2).
- ಪಿಲಾತನು ಯೇಸುವನ್ನು ವಿಚಾರಣೆ ಮಾಡಿದನು (ಮತ್ತಾಯ 27:11; ಮಾರ್ಕ 15:2; ಲೂಕ 23:3; ಯೋಹಾನ 18:33-38).
- ಯೇಸುವನ್ನು ಹೆರೋದನೆಡೆಗೆ ಕಳಹಿಸಿದ್ದು ವ್ಯಾಖ್ಯಾನಕ್ಕಾಗಿ ಮತ್ತೊಬ್ಬರ ಅಭಿಪ್ರಾಯವನ್ನು ಎದುರು ನೋಡುವುದಕ್ಕಾಗಿ ಆಗಿರಬಹುದು (ನೋಡಿರಿ ಲೂಕ 23:15).
- ನ್ಯಾಯಾಸನವು ಅನೇಕ ಸಾರಿ ಸೂಚಿತವಾಗಿದೆ (ಮತ್ತಾಯ 27:19; ಯೋಹಾನ 19:13); ಪಿಲಾತನು ರೋಮದ ಅಧಿಕೃತ ಪ್ರತಿನಿಧಿಯಂತೆ ಮಾತನಾಡುತ್ತಿದ್ದಾನೆ. "ಪಿಲಾತನು [ನ್ಯಾಯಾಸನದ ಮೇಲೆ ಕಾತಾಗ], ಆತನು ರೋಮಾದಲ್ಲಿದ್ದನು."[16]

ಸೂಚಿಸಲ್ಪಟ್ಟ ರೀತಿಯನ್ನು ಪಿಲಾತನು ಅನುಸರಿಸಲಿಲ್ಲ ಎಂಬುದು ಸಮಸ್ಯೆಯಲ್ಲ. ಇಲ್ಲಿನ ಸಮಸ್ಯೆಯೆಂದರೆ, ಒಂದು ಸಾರಿ ಆತನು ತೀರ್ಪನ್ನು ಕೊಟ್ಟಾಗ, ಅದನ್ನು ಆತನು ಹಿಂದಕ್ಕೆ ಪಡೆಯುವಂತಿರಲಿಲ್ಲ, ಆತನು ಯೇಸುವನ್ನು ಪ್ರಶ್ನಿಸಿದ ನಂತರ ಆತನು ಆರೋಪಿಸುವವರ ಕಡೆಗೆ ತಿರುಗಿಕೊಂಡನು ಮತ್ತು "ಈ ಮನುಷ್ಯನಲ್ಲಿ ನನಗೆ ಯಾವ ಅಪರಾಧವೂ ಕಾಣಿಸದು" ಎಂದು ಉದ್ಘೋಷಿಸಿದನು (ಲೂಕ 23:4; ನೋಡಿರಿ ವಚನ 14). NIV ಯಲ್ಲಿ "ಈ ಮನುಷ್ಯನ ವಿರುದ್ಧ ಯಾವ ಆಪಾದನೆಯ ಮೂಲವನ್ನು ನಾನು ಕಂಡುಕೊಳ್ಳಲಿಲ್ಲ" ಎಂದಿದೆ. ಅದೇ ರೀತಿಯಂತೆ ಆತನು ಯೇಸುವನ್ನು ಬಿಡುಗಡೆ ಮಾಡಬೇಕಿತ್ತು[17] ಆದರೆ ಆತನು ಮಾಡಲಿಲ್ಲ.

ವಿಚಾರಣೆಯ ಸರಣಿಯಲ್ಲಿ ಪಿಲಾತನು ಪುನಪುನವಾಗಿ ಯೇಸುವಿನಲ್ಲಿ "ಯಾವ ತಪ್ಪು ಕಾಣದು!" ಎಂದು ಉಚ್ಚರಿಸಿದನು:[18]

> "ಈ ಮನುಷ್ಯನಲ್ಲಿ ನನಗೆ ಯಾವ ಅಪರಾಧವೂ ಕಾಣಿಸದು" (ಲೂಕ 23:4).
>
> "... ನೀವು ಇವನ ಮೇಲೆ ತಂದ ದೂರುಗಳ ವಿಷಯವಾಗಿ ... ಇವನಲ್ಲಿ ಒಂದು ತಪ್ಪಾದರೂ ನನಗೆ ಕಾಣಲಿಲ್ಲ" (ಲೂಕ 23:14).
>
> ... ಅವನು ಮೂರನೆಯ ಸಾರಿ, "ಯಾಕೆ ಕೆಟ್ಟದ್ದನ್ನೇನು ಮಾಡಿದನು? ನಾನು ಇವನಲ್ಲಿ ಮರಣದಂಡನೆಗೆ ತಕ್ಕ ಅಪರಾಧವೇನೂ ಕಾಣಲಿಲ್ಲ ..." ಎಂದನು (ಲೂಕ 23:22).
>
> ಪಿಲಾತನು ... ತಿರುಗಿ ಯೆಹೂದ್ಯರ ಬಳಿಗೆ ಹೊರಕ್ಕೆ ಬಂದು, "ನನಗೆ ಅವನಲ್ಲಿ ಯಾವ ಅಪರಾಧವು ಕಾಣಿಸುವುದಿಲ್ಲ ..." ಅಂದನು (ಯೋಹಾನ 18:38).
>
> ತರುವಾಯ ಪಿಲಾತನು ತಿರುಗಿ ಹೊರಗೆ ಬಂದು, "ನನಗೆ ಅವನಲ್ಲಿ ಯಾವ

> ಅಪರಾಧವೂ ಕಾಣಿಸಲಿಲ್ಲ ಎಂಬುದು ನಿಮಗೆ ತಿಳಿಯುವಂತೆ ಅವನನ್ನು ನಿಮ್ಮ ಬಳಿಗೆ ಹೊರಕ್ಕೆ ತರುತ್ತೇನೆ ನೋಡಿರಿ ..." ಅಂದನು (ಯೋಹಾನ 19:4).

> ಪಿಲಾತನು ಅವರಿಗೆ, "ನನಗೆ ಅವನಲ್ಲಿ ಅಪರಾಧವೂ ಕಾಣಿಸಲಿಲ್ಲ ..." ಎಂದು ಹೇಳಿದನು (ಯೋಹಾನ 19:6).

ನ್ಯಾಯದ ಮೂಲ ತತ್ವವು ದ್ವಿವಿಪತ್ತಿನ ವಿರುದ್ಧದ ನಿಷೇಧವೇ ಆಗಿತ್ತು.[19] ಅವನ ಅಥವಾ ಅವಳ ನಡತೆಗೆ ಕಾರಣವಾದ ಅಪರಾಧಕ್ಕೆ ಒಬ್ಬ ವ್ಯಕ್ತಿಯು ಎರಡನೆಯ ಸಾರಿ ವಿಚಾರಣೆಗೆ ಈಡಾಗುವುದಿಲ್ಲ ಎಂದು ನ್ಯಾಯಕ್ಕೆ ಸಂಬಂಧಿಸಿದಂತಹ ಸರಳ ಹೇಳಿಕೆಯಾದ *"ದ್ವಿವಿಪತ್ತು"* ಹೇಳುವುದಾಗಿದೆ. ಪಿಲಾತನ ಮುಂದಿನ ಯೇಸುವಿನ ವಿಚಾರಣೆಯಲ್ಲಿ ಆತನು ಕೇವಲ ದ್ವಿಪತ್ತಿನ ವಿಷಯ ಮಾತ್ರವಾಗಿರಲಿಲ್ಲ, ತ್ರೈಪದಿ ವಿಪತ್ತು ಮತ್ತು ಅದನ್ನು ಮೀರಿದ್ದು ಆಗಿದ್ದನು.

ಪಿಲಾತನು ತನ್ನ ಮೊದಲ ತೀರ್ಪಿನಲ್ಲಿ "ಆತನು ನಿರಪರಾಧಿ" ಎಂದು ಸಮರ್ಥಿಸಿಕೊಳ್ಳುವಲ್ಲಿ ವಿಫಲನಾದ ಕ್ಷಣದಿಂದ ನ್ಯಾಯವು ಅದರ ಕ್ರಮದಲ್ಲಿ ಅಳಿಸಿ ಹೋಯಿತು. ಮಹಾಸಭೆಯು ಯಾಕೆ ಮರಣಶಿಕ್ಷೆ ಕೊಡುತ್ತಿದೆ ಎಂಬುದನ್ನು ಪಿಲಾತನು ತಿಳಿದುಕೊಳ್ಳಬೇಕಿತ್ತು (ಮತ್ತಾಯ 27:18; ಮಾರ್ಕ 15:10), ಆದರೆ ಆತನು ಇನ್ನೂ ಅವನನ್ನು ಬಿಡುಗಡೆ ಮಾಡಲಿಲ್ಲ. ಕ್ರಿಸ್ತನು ನಿರಪರಾಧಿ ಎಂಬುದರ ಅರಿವು ಆತನಿಗಿತ್ತು, ಆದರೆ ಆತನಿನ್ನೂ ವಿಪ್ಲವದಲ್ಲಿದ್ದನು. ಯೇಸು ಮರಣಶಿಕ್ಷೆಗೆ ಯೋಗ್ಯವಾದದ್ದನ್ನು ಏನು ಮಾಡಿಲ್ಲ ಎಂದು ಆತನು ಬಲ್ಲವನಾಗಿದ್ದನು, ಆದರೆ ಇನ್ನು ಆತನು ಅವನನ್ನು ಮರಣಶಿಕ್ಷೆಗೆ ಒಪ್ಪಿಸಿದನು.

ಇದು ರಾಜಕೀಯ ಹಂಚಿಕೆ ಎಂಬಂತೆ ಪಿಲಾತನು ವರ್ತಿಸಿದನು,[20] ಆದರೆ ಇದು ಅದನ್ನು ಯೋಗ್ಯವನ್ನಾಗಿ ಮಾಡಲಿಲ್ಲ. ಯೆಹೂದಿಗಳು ಒತ್ತಡವನ್ನು ಹೆಚ್ಚಿಸಿದಂತೆ "ಯೇಸು ಒಬ್ಬ ಅಧಿಕಾರಿಯಿಂದ ಇನ್ನೊಂದು ಅಧಿಕಾರಿಯತ್ತ ಪಿಲಾತನು ಆತನನ್ನು "ಶಿಲುಬೆಗೆ ಹಾಕುವುದಕ್ಕೆ" ಒಪ್ಪಿಸಲ್ಪಡುವವರೆಗೆ ಅಂತಿಮದವರೆಗೂ, ಅಕ್ಷಮ್ಯವಾಗಿ ತರಾತುರಿಯಿಂದ ನೂಕಲ್ಪಟ್ಟನು[21] (ಮತ್ತಾಯ 27:26).

ಯೇಸು ಪಿಲಾತನಿಂದ ವಿಚಾರಣೆಗೆ ಒಳಗಾಗಿ ತಪ್ಪಿತಸ್ಥನು ಎಂದು ಕಂಡುಬರಲಿಲ್ಲ, ಬದಲಾಗಿ, ರೋಮನ್ ಸರಕಾರವು ಆತನನ್ನು ನಿರಪರಾಧಿ ಎಂದು ಸಮಯದಿಂದ ಸಮಯಕ್ಕೆ ಘೋಷಿಸಿತು. ವಿಚಾರಣೆಯುದ್ದಕ್ಕೂ ಮತ್ತು ಆನಂತರದ ಘಟನೆಗಳಲ್ಲಿ ಯೇಸುವಿನ ಸಂಘರ್ಷಕ್ಕೆ ಬಂದವರೆಲ್ಲ ಆತನು ನಿರಪರಾಧಿ ಎಂದು ತಿಳಿದಿದ್ದರು. ಆತನು ನಿರಪರಾಧಿ ಎಂದು ಆತನ ವೈರಿಗಳು ತಿಳಿದಿದ್ದರು.[22] ಆತನು ನಿರಪರಾಧಿ ಎಂದು ಪಿಲಾತನು ತಿಳಿದಿದ್ದನು. ಆತನು ನಿರಪರಾಧಿ ಎಂದು ಪಿಲಾತ ಹೆಂಡತಿಯು ತಿಳಿದಿದ್ದಳು (ಮತ್ತಾಯ 27:19). ಆತನು ನಿರಪರಾಧಿ ಎಂದು ಹೆರೋದನು ತಿಳಿದಿದ್ದನು (ಲೂಕ 23:15). ಆತನು ನಿರಪರಾಧಿ ಎಂದು ಆತನಿಗೆ ಗುರುದ್ರೋಹವೆಸಗಿದ ಯೂದನು ಕೂಡ ತಿಳಿದಿದ್ದನು (ಮತ್ತಾಯ 27:4). ಯೇಸುವಿನೊಡನೆ ಕ್ರೂಜಿತನಾದ ಕಳ್ಳರಲ್ಲಿ ಒಬ್ಬನು ಕೂಡಾ ಆತನು ನಿರಪರಾಧಿ ಎಂದು ತಿಳಿದಿದ್ದನು (ಲೂಕ 23:41). ಕ್ರೂಜೆಗೆ ಹಾಕುವ ಶತಾಪಥಿತಿಯೂ ಕೂಡಾ ಆತನು ನಿರಪರಾಧಿ ಎಂದು ಬಲ್ಲವನಾಗಿದ್ದನು (ನೋಡಿರಿ ಮತ್ತಾಯ 27:54; ಮಾರ್ಕ 15:39).

## ಇಪ್ಪತ್ತೊಂದನೆಯ ಶತಮಾನದಲ್ಲಿ ಯೇಸುವಿನ ವಿಚಾರಣೆ

ಮೊದಲನೆಯ ಶತಮಾನದಿಂದ ಇಪ್ಪತ್ತೊಂದನೆಯ ಶತಮಾನದತ್ತ ನಾವು ಸಾಗುವಾ. ಯೇಸುವಿನ ಬಗೆಗಿನ ಇತರರ ತೀರ್ಪನ್ನು ನಾವು ನೋಡಿದೆವು, ಆದರೆ ಈಗ ನಾನು "ನಿಮ್ಮ ತೀರ್ಪೇನು?" ಎಂದು ನಾನು ಕೇಳುತ್ತೇನೆ. ತ್ವರೆಯಿಂದ ಈ ಪ್ರಶ್ನೆಗೆ ಉತ್ತರಸದಿರಿ. ನೀವು ಮಾಡುವ ನಿರ್ಧಾರದ ಮಹತ್ವವನ್ನು ಅರಿತುಕೊಳ್ಳುವುದರ ಅವಶ್ಯಕತೆಯು ನಿಮಗಿದೆ.

ಆತನ ಹೇಳಿಕೆಯ ಅರ್ಥವನ್ನು ಅರಿತುಕೊಳ್ಳದೆ "ದೋಷವಿಲ್ಲ" ಎಂಬುದು ನನ್ನ ತೀರ್ಪು

ಅಂತೆಯೇ ಯೇಸುವಿಗೆ ಮರಣವು ಸರಿಯಲ್ಲ ಎಂದು ಕೆಲವರು ಪ್ರತಿಕ್ರಯಿಸುವುದನ್ನು ನಾನು ಊಹಿಸಿಕೊಳ್ಳಬಲ್ಲೆ. ಆತನು ದೇವಕುಮಾರನು ಮತ್ತು ನಮ್ಮ ಜೀವಿತದ ಒಡೆಯನು ಎಂದು ಒಪ್ಪಿಕೊಳ್ಳದ ಹೊರತು ಯೇಸು "ತಪ್ಪಿಲ್ಲದವನು" ಎಂದು ದೃಢವಾಗಿ ನೀವು ಹೇಳಲಾರಿರಿ.

ನಾನು ಯಾಕೆ ಆ ರೀತಿಯ ಖಂಡಿತವಾದ ಹೇಳಿಕೆಯನ್ನು ಮಾಡುವವನಾಗಿದ್ದೇನೆ? ಯೇಸು ಯೆಹೂದಿಗಳಿಂದ ಮತ್ತು ರೋಮನ್ನರಿಂದ ಯಾಕೆ ನಿಂದಿಸಲ್ಪಟ್ಟನು ಎಂಬುದನ್ನು ಪುನರಾವರ್ತಿಸುವಾ. ಯೇಸು ತನ್ನನ್ನು ದೇವಕುಮಾರನು ಎಂದು ಗುರುತಿಸಿಕೊಂಡಿದ್ದಕ್ಕಾಗಿ ಯೆಹೂದಿ ನಾಯಕರು ಆತನನ್ನು ದೇವದೂಷಣೆಯ ಆಪಾದನೆಯಲ್ಲಿ ಇಟ್ಟರು (ಮತ್ತಾಯ 26:63-66). ಯೇಸುವಿನ ದೈವತ್ವವನ್ನು ಒಪ್ಪಿಕೊಳ್ಳಲು ಇಚ್ಛೆಪಡದೆ ಅವರು "ದೋಷದ ಆರೋಪದಲ್ಲಿ" ಆತನನ್ನು ಕಂಡರು. ಪಿಲಾತನ ಮುಂದೆ ಮಾಡಿದ ಆರೋಪವು ಯೇಸು ಅರಸನೆಂದು ಪ್ರತಿಪಾದಿಸಿದ್ದು (ಲೂಕ 23:2), ಅದನ್ನು ಆತನು ನಿರಾಕರಿಸದೆ ಇದ್ದ ಆಪಾದನೆಯೇ (ಮತ್ತಾಯ 27:11) ಆಗಿತ್ತು. ರೋಮನ್ನರ ಶಿಲುಬೆಯ ಮೇಲೆ ಯೇಸು ಶಿಲುಬೆಗೆ ಹಾಕಲ್ಪಟ್ಟಂಥ "ಅಪರಾಧವು" ಆತನು ತನ್ನನ್ನು ಯೆಹೂದ್ಯರ ಅರಸನನ್ನಾಗಿ ಮಾಡಿಕೊಂಡಿದ್ದೇ ಆಗಿತ್ತು (ನೋಡಿರಿ ಯೋಹಾನ 19:19-22).

ಯೇಸುವಿನ ವೈರಿಗಳು ಆತನ ದಿವ್ಯ ಪದವಿಯ ಪ್ರತಿಪಾದನೆಯನ್ನು ನಿರಾಕರಿಸುವವರಾಗಿದ್ದರು; ಅವರ ಕಣ್ಣಲ್ಲಿ ಆತನು ಕೇವಲ ಮರಣಕ್ಕೆ ಯೋಗ್ಯವಾದ ತೊಂದರೆದಾಯಕನಾಗಿದ್ದನು. ಇದೆಲ್ಲವನ್ನು ಮನದಲ್ಲಿ ಇಟ್ಟುಕೊಂಡು, "*ನಿಮ್ಮ ತೀರ್ಪೇನು?*" ಯೇಸು ದೇವಕುಮಾರನು ಎಂದು ಒಪ್ಪಲು ಸಿದ್ಧವಿದ್ದೀರಾ? ಯೇಸು ರಾಜಕೀಯ ಬಂಡಾಯದ ಮತ್ತು ಒಳಸಂಚಿನ ತಪ್ಪಿನಲ್ಲಿದ್ದಾನೆ ಎಂದು ನೀವು ನಂಬುತ್ತೀರಾ ಅಥವಾ ಆತನನ್ನು ಆತ್ಮೀಕ "ಅರಸರ ಅರಸನು ಮತ್ತು ಕರ್ತರ ಕರ್ತನು" ಎಂದು ಅಂಗೀಕರಿಸಿಕೊಳ್ಳಲು ನೀವು ಸಿದ್ಧರಿದ್ದೀರಾ (ಪ್ರಕಟನೆ 19:16)? ಎಂದು ನಾನು ನಿಮ್ಮನ್ನು ಕೇಳುತ್ತೇನೆ. ಏನೇ ಆಗಲಿ ಆತನ ಪ್ರಜೆಯಾಗಲು, ಆತನ ಚಿತ್ತಕ್ಕೆ ನಿಮ್ಮನ್ನು ಒಪ್ಪಿಸಲು ನೀವು ಸಿದ್ಧರಿದ್ದೀರಾ (ಲೂಕ 6:46)? ಯೇಸುವನ್ನು ದೇವಕುಮಾರನೆಂದು ಮತ್ತು ನಿಮ್ಮ ಜೀವಿತದ ಕರ್ತನೆಂದೂ ಒಪ್ಪಿಕೊಳ್ಳಲು ನೀವು ಸಿದ್ಧರಿಂದ ಹೊರತು ನೀವು ಖಂಡಿತವಾಗಿ ಆತನಲ್ಲಿ "ದೋಷವಿಲ್ಲ" ಎಂದು ಹೇಳಲಾರಿರಿ ಎಂದು ನಾನು ತಿರುಗಿ ಹೇಳುತ್ತೇನೆ.

ಯೇಸುವಿಗೆ ಆತನ ಯಾವುದೇ ದೋಷದ ನಿಮಿತ್ತ ರೋಮನ್ನ ಶಿಲುಬೆಯು ಹೊರಿಸಲ್ಪಡಲಿಲ್ಲ, ಆದರೆ ಇತರರ ಜೀವಿತದಲ್ಲಿನ ಪಾಪಗಳ ಕಾರಣದಿಂದ ಶಿಲುಬೆಯು ಹೊರಿಸಲ್ಪಟ್ಟಿತು.[23] ಶುಕ್ರವಾರ ಆ ಉದ್ದನೆಯ ದಿನದಲ್ಲಿ, ನ್ಯಾಯವು ವೈರತ್ವದಿಂದ, ನಿರ್ಲಕ್ಷದಿಂದ ಮತ್ತು ರಾಜಿಯಿಂದ ಕತ್ತುಹಿಸುಕಲ್ಪಟ್ಟಿತ್ತು (ನೋಡಿರಿ ಮತ್ತಾಯ 27:18; ಅಪೊಸ್ತಲರ ಕೃತ್ಯಗಳು 3:17; ಮಾರ್ಕ 15:15). ಈ ಸಂಬಂಧಿತ ಗುಣಗಳು ಯೇಸು ನಿಜವಾಗಿಯೂ ಯಾರಾಗಿದ್ದಾನೆ ಎಂಬುದರ ಬಗ್ಗೆ ಜನರನ್ನು ಕುರುಡರನ್ನಾಗಿಸಿದ್ದವು. ಕೆಲ ಜನರು ತಮಗೆ ಇತರರು ಆತನ ಬಗೆಗೆ ಹೇಳಿದ ಮಾತುಗಳಿಂದ ಪೂರ್ವಾಗ್ರಹ ಪೀಡಿತರಾಗಿದ್ದರು. ಆತನ ಬಗೆಗೆ ಶಾಸ್ತ್ರವು ನಿಜವಾಗಿ ಏನನ್ನು ಬೋಧಿಸುವುದೋ ಅದನ್ನು ಕೇವಲ ಅಲಕ್ಷ್ಯ ಮಾಡಿಬಿಟ್ಟಿದ್ದರು. ಆತನ ಬಗ್ಗೆ ಒಂದು ನಿಲುವನ್ನು ಹೊಂದಲು ಪಿಲಾತನಂಥವರು ಸಿದ್ಧರಿರಲಿಲ್ಲ, ಅವರು "ಜನರ ಗುಂಪನ್ನು ತೃಪ್ತಿಪಡಿಸಲು" ಬಯಸಿದ್ದರು (ಮಾರ್ಕ 15:15).

ಯೇಸು ಮಹಾ ಸಭೆಯಿಂದ ವಿಚಾರಣೆಗೊಳಗಾದಂತೆಯೇ, ಆತನು ಮುಚ್ಚಿದ ಮನಸ್ಸುಳ್ಳ ಸಭೆಯನ್ನು ಸೂಚಿಸುತ್ತಾ "ನಾನು ನಿಮಗೆ [ನಾನು ಕ್ರಿಸ್ತನೆಂದು] ಹೇಳಿದರೆ ನೀವು ನಂಬುವುದಿಲ್ಲ, ನಾನು ನಮ್ಮನ್ನು ಏನಾದರೂ ಕೇಳಿದರೆ ನಾವು ಉತ್ತರ ಕೊಡುವುದಿಲ್ಲ" ಎಂದು ಹೇಳಿದನು (ಲೂಕ 22:67, 68). ಯೇಸುವಿನ ಪ್ರವಾದನೆಯನ್ನು ಗಂಭೀರವಾಗಿ ವಿಚಾರಣೆ ಮಾಡುವ ಇಚ್ಛೆಯು ಅವರಿಗಿರಲಿಲ್ಲ. ಖಚಿತವಾಗಿ ಕ್ರಿಸ್ತನ ಜೀವಿತದ ಬಗೆಗಿನ ನಮ್ಮ

ಅಧ್ಯಯನವು ಯೇಸು ಪ್ರತಿಪಾದಿಸಿದ್ದನ್ನು ನಂಬುವ ಎಲ್ಲಾ ಪ್ರತಿಯೊಂದು ಹೃದಯವನ್ನು ತಣಿಸಲು ಸಾಕಾಷ್ಟಾಗಿದೆ.[24] ಹಿಂದೆಯೇ ನಿಮ್ಮ ನಂಬಿಕೆಯನ್ನು ಕ್ರಿಸ್ತನಲ್ಲಿ ಅರಿಕೆ ಮಾಡದಿದ್ದಲ್ಲಿ, "ದೋಷವಿಲ್ಲ ಎಂಬ ನಿಮ್ಮ ಇಂದಿನ ತೀರ್ಪಿಗೆ ಸಂಬಂಧಿಸಿದಂತೆ ನನ್ನ ನಿರೀಕ್ಷೆ ಮತ್ತು ಪ್ರಾರ್ಥನೆಯು ಆಗಿದೆ - ಕಾರಣ ನಾನು ನನ್ನ ಹೃದಯದಿಂದ ಯೇಸುವೇ ಕ್ರಿಸ್ತನು, ಜೀವಿಸುವ ದೇವರ ಕುಮಾರನು ಎಂದು ನಂಬುವವನಾಗಿದ್ದೇನೆ!" (ನೋಡಿರಿ ಮತ್ತಾಯ 16:16).

## ಮುಕ್ತಾಯ

"ಯೇಸುವನ್ನು ಏನು ಮಾಡುತ್ತಿ?" ಎಂಬ ಪ್ರಶ್ನೆಯನ್ನು ಕೇಳಿದ್ದೇವೆ. ಇದು ನಿರ್ಧಾರವನ್ನು ಮಾಡುವ ಸಮಯವು ಆಗಿದೆ. Albert Simpson ಹೀಗೆ ಬರೆಯುತ್ತಾನೆ,

> ಸ್ನೇಹಿತ ರಹಿತನಾದ ಮರೆಯಲ್ಪಟ್ಟ ಎಲ್ಲರಿಂದ ದ್ರೋಹಕ್ಕೊಳಗಾದ ಯೇಸು ಪಿಲಾತನ,
> ಅರಮನೆಯಲ್ಲಿ ನಿಂತಿದ್ದಾನೆ;
> ಒಮ್ಮಿಮದೊಮ್ಮಲೆ ಕರೆಬಂದವರ ಅರ್ಥವೇನು!
> ಯೇಸುವನ್ನು ನಿನೇನು ಮಾಡುವಿ?
>
> ಯೇಸು ಇನ್ನು ವಿಚಾರಣೆಯಲ್ಲಿ ನಿಂತಿದ್ದಾನೆ,
> ನೀನು ಬಯಸಿದ್ದಾದರೆ ಆತನಿಗೆ ಸುಳ್ಳುಗಾರನಾಗಿರಬಹುದು;
> ಒಳ್ಳೆಯದ ಅಥವಾ ಅಸೌಖ್ಯದಿಂದ ಆತನಿಗೆ ನಂಬಿಗಸ್ತನಾಗಿರಬಹುದು;
> ಯೇಸುವಿನೊಡನೆ ನೀನೇನು ಮಾಡಬಯಸುತ್ತಿ?
>
> ಪಿಲಾತನ ವಿಚಾರಣೆಯಂತೆ ನೀನು ಕೂಡಾ ನುಣುಚಿಕೊಳ್ಳಬಹುದು,
> ಅಥವಾ ಏನೇ ಸಂಭವಿಸಲಿ ಆತನನ್ನು ಆರಿಸಿಕೊಳ್ಳಬಲ್ಲೆಯಾ?
> ತಿಳಿಗೇಡಿತದಿಂದ ಆತನಿಂದ ಮುಚ್ಚಿಕೊಳ್ಳಲು ಹೋರಾಡುತ್ತಿದ್ದೀರಾ,
> ಯೇಸುವಿನೊಡನೆ ನೀವೇನು ಮಾಡಬಯಸುತ್ತೀರಿ?
>
> ನನ್ನ ಸ್ನೇಹಿತರೇ, ಯೇಸುವಿನೊಡನೆ ನೀವೇನು ಮಾಡಬಯಸುತ್ತೀರಿ?
> ತಾಟಸ್ಥನಾಗಿ ನೀವು ಇರಲಾರಿರಿ:
> ಓ ಸ್ನೇಹಿತನೇ ಒಂದು ದಿನ ನಿನ್ನ ಹೃದಯ ನಿನ್ನನ್ನು ಕೇಳುವದು,
> "ನನಗಾಗಿ ನೀನೇನು ಮಾಡುತ್ತಿ?"[25]

ಯೇಸು, ಯೆಹೂದಿಗಳು ಮತ್ತು ಪಿಲಾತನು ವಿಚಾರಣೆಯಲ್ಲಿ ಇದ್ದಾಗ ತಾವೂ ಕೂಡಾ ಆತನ ಮುಂದೆ ವಿಚಾರಣೆಯಲ್ಲಿ ಇರುವುದಾಗಿ ಅವರು ಅರ್ಥೈಸಿಕೊಳ್ಳಲಿಲ್ಲ. ಅವರು ಕೇವಲ ಯೇಸುವಿಗೆ ಮಾತ್ರ ಮರಣದಂಡನೆಯನ್ನು ಕೊಡಲಿಲ್ಲ ಆದರೆ ತಮ್ಮ ನಿರ್ಧಾರದ ಮೂಲಕ ಅವರು ತಮ್ಮನ್ನು ತಾವೇ ದೋಷಿಸಿಕೊಂಡರು. ಕೆಲವರ್ಷಗಳ ನಂತರ ಪಿಲಾತನು ತನ್ನ ಸ್ಥಾನವನ್ನು ಕಳಕೊಂಡನು ಮತ್ತು ಆತ್ಮಹತ್ಯೆಯನ್ನು ಮಾಡಿಕೊಂಡನು,[26] ಕೆಲದಶಕದ ನಂತರ ಯೆರೂಸಲೇಮು ಪಟ್ಟಣವು ನಾಶಮಾಡಲ್ಪಟ್ಟಿತು. ಯೇಸುವಿನ ಬಗೆಗೆ ಇಂದಿನ ನಿಮ್ಮ ನಿರ್ಧಾರವು ನಿಮ್ಮ ನಿತ್ಯತ್ವವನ್ನು ಕಳೆಯುವಲ್ಲಿ ಪರಿಣಮಿಸುವುದಾಗಿದೆ (ನೋಡಿರಿ ಮತ್ತಾಯ 10:32, 33; 2 ತಿಮೋಥೆ 2:12). ನಿಮ್ಮ ನಿಮ್ಮ ಪಾಪಗಳಿಗಾಗಿ ಪಶ್ಚಾತ್ತಾಪಪಡುವ ಅವಶ್ಯಕತೆಯು ನಿಮಗಿದ್ದರೆ, ಆತನಲ್ಲಿ ನಿಮ್ಮ ನಂಬಿಕೆಯನ್ನು ಅರಿಕೆ ಮಾಡಿರಿ ಮತ್ತು ಆತನ ಚಿತ್ತಕ್ಕೆ ವಿಧೇಯರಾಗಿರಿ (ಲೂಕ 13:3; ಮತ್ತಾಯ 10:32; ಮಾರ್ಕ 16:15, 16). ಇದನ್ನು ಈ ದಿನವೇ ಮಾಡಿರಿ!

## ಮಾಹಿತಿ

ಈ ಪ್ರಸಂಗಕ್ಕೆ ಇನ್ನೊಂದು ಶೀರ್ಷಿಕೆ ಎಂದರೆ ಹಿಂದೆಂದು ನೀವು ಬಳಸದಂತಹ ಶೀರ್ಷಿಕೆ "ನ್ಯಾಯವಿಚಾರಣೆಯಲ್ಲಿ ಯೇಸು" ಎಂದಾಗಿದೆ. ಈ ಪ್ರಸಂಗವನ್ನು ಯೇಸು ದೈವಿಕ ಪುರುಷ ಎಂಬ ವಿವರಣೆ ಪುರಾವೆಯ ಮೂಲಕ ವಿವರಿಸಬಹುದು.

---

ಟಿಪ್ಪಣಿಗಳು

[1]ಈ ಪ್ರಸಂಗಕ್ಕೆ ಇರುವ ವೇದಭಾಗಗಳು ಮತ್ತಾಯ 26:57, 59-68; 27:1, 2, 11-31; ಮಾರ್ಕ 14:53, 55-65; 15:1-20; ಲೂಕ 22:54ಎ, 63-71; 23:1-25; ಯೋಹಾನ 18:12-14, 19-24, 28-40; 19:1-16. [2]ಈ ವಿರೋಧಗಳಿಗೆ ಉತ್ತರಿಸುವ ಇನ್ನೊಂದು ಅಂಶವೆಂದರೆ ನಮ್ಮ ರಕ್ಷಣೆಯನ್ನು ತರಲು ಯೇಸು ಯಾಕೆ ಮರಣಿಸಬೇಕಾಯಿತು ಎಂಬುದನ್ನು ವಿವರಿಸಲಬೇಕು. [3]ಈ ವಿಚಾರಣೆಗಳನ್ನು ಹೊಂದಿದ ಪಾಠಗಳನ್ನು ಈ ಪ್ರಸಂಗವು ಅನುಸರಿಸದಿದ್ದರೆ ನೀವು ಈ ವಿಚಾರಣೆಗಳನ್ನು ಪುನರಾವರ್ತಿಸಬಹುದು. [4]ಹಾರ್ವರ್ಡ್ US ನ ಕೇಂಬ್ರಿಡ್ಜ್‌ನ Massachusetts ಲ್ಲಿನ ಬಲು ಪ್ರಮುಖ ವಿಶ್ವಾವಿದ್ಯಾಲಯ ಇದು ಕಾನೂನು ಮಹಾವಿದ್ಯಾಲಯಕ್ಕೆ ಹೆಸರಾಗಿದೆ. [5]Raymond E. Brown, *The Death of the Messiah,* vol. 1 (New York: Doubleday, 1994), 330. [6]*The Mishnah* (also spelled "Mishna"), along with *The Gemara* (later commentaries on *The Mishnah*), make up *The Talmud*, which still regulates Jewish activities today. [7]ಈ ಪಟ್ಟಿ ಅಂಶವು ವಿವಿಧ ಮೂಲಗಳಾದ including Brown, 358–59, and Bruce Corley, "Trial of Jesus," *Dictionary of Jesus and the Gospels*, ed. Joel B. Green and Scot McKnight (Downers Grove, Ill.: InterVarsityPress, 1992), 851. [8]ಮಹಾಸಭೆಯ ಒಬ್ಬ ಸದಸ್ಯನು ಅರಿಮಥಾಯದ ಯೋಸೇಫನು ಅವರ ಆಲೋಚನೆಗೂ ಕೃತ್ಯಕ್ಕೂ ಸಮ್ಮತಿಸಲಿಲ್ಲ ಎಂದು ಲೂಕ ನಂತರದಲ್ಲಿ ಹೇಳಿದ್ದಾನೆ (ಲೂಕ 23:51). ಅದು ಕಾರ್ಯರೂಪಕ್ಕೆ ಬಂದಾಗ ಯೇಸೇಫನು ಬಹುಶಃ ಅಲ್ಲಿ ಉಪಸ್ಥಿತನಿರಲಿಕ್ಕಿಲ್ಲ ಅಥವಾ ಮಾರ್ಕ ಮತ್ತು ಲೂಕನು "ಎಲ್ಲರೂ" ಎಂದು ಬಳಸಿದ ಪದವು ಅಲ್ಲಿ "ತುಂಬಿತುಳುಕುವ ಹೆಚ್ಚಿನ ಸಂಖ್ಯೆ"ಗಾಗಿ ಇರಬಹುದು. [9]ಯೆಹೂದಿ ವಿಚಾರಣೆಯ ಯೇಸುವಿನ ಹೊಸ ಒಡಂಬಡಿಕೆಯ ವಿವರಗಳು ಯಾವುದೇ ಯೆಹೂದಿ ನ್ಯಾಯಾಲಯ ಈ ರೀತಿಯ ಅಮಾನುಷ ರೀತಿ ಯಲ್ಲಿ ವರ್ತಿಸಿಲ್ಲ ಎಂಬವುಗಳಿಂದ ಸವಾಲಿಗೀಡಾಗಿವೆ. ಈ ಆಕ್ಷೇಪಣೆಕಾರರು ಅನೇಕ ಉದ್ದೇಶ ಪೂರಕವಾದ ನ್ಯಾಯದ ವಿಫಲತೆಯ - "ಧಾರ್ಮಿಕ" ನ್ಯಾಯಪೀಠದ ಬಗ್ಗೆಯೂ ಕೂಡಾ ತಿಳುವಳಿಕೆಯನ್ನು ಹೊಂದಿಲ್ಲ. ಅದು ಮನುಕುಲದ ಇತಿಹಾಸದ ಮೇಲೆ ಕಪ್ಪುಚುಕ್ಕೆಯಾಗಿದೆ. ಸುವಾರ್ತಾ ಲೇಖಕರ ವಿವರಣೆಯು ದೇವರಿಂದ ಪ್ರೇರೇಪಿತವಾದದ್ದು, ಆದ್ದರಿಂದಲೇ ಅವರು ಸತ್ಯವನ್ನೇ ದಾಖಲಿಸಿದ್ದಾರೆ. ಸತ್ಯವನ್ನು ಬಿಟ್ಟುಮತ್ತೇನಿಲ್ಲ. [10]ಇಂಥ "ಕ್ರಮಭಂಗದ" ಬಗ್ಗೆ ಕೆಲವರು ಸೂಚಿಸುವವರಾಗಿದ್ದಾರೆ ಆದರೆ "ಅನ್ಯಾಯವು" ಇಲ್ಲಿ ಹೆಚ್ಚು ನಿಖರವಾಗಿ ಕಂಡುಬರುತ್ತದೆ.

[11]ಹೆಚ್ಚು ಕಡಿಮೆ ಇಪ್ಪತ್ತೇಳು ಅನ್ಯಾಯಗಾರರು ಇದ್ದರು ಎಂದು ಕೆಲವರು ನಂಬುತ್ತಾರೆ (Corley, 851). [12]ಪಟ್ಟಿಯು ಬಹುಶ ವಿಸ್ತೃತವಾದದ್ದಾಗಿದೆ. ಉದಾಹರಣೆಗೆ *The Mishnah* ಪ್ರಕಾರ ನ್ಯಾಯಾಧೀಶನು ಆಗಿರುವಾತನು ಸಾಕ್ಷಿಯಾಗಿರಬಹುದು (Sanhedrin 5.4), ಆದರೆ ಯೇಸುವನ್ನು ದೇವದೂಷಕ ಎಂದು ಕರೆಯುವಲ್ಲಿ ಮಹಾ ಸಭೆಯ ಸದಸ್ಯರು ನ್ಯಾಯಧೀಶರೂ ಮತ್ತು ಸಾಕ್ಷಿಗಳು ಎರಡು ಆಗಿದ್ದರು (ಲೂಕ 22:71). [13]Warren W. Wiersbe, *The Bible Exposition Commentary,* vol. 1 (Wheaton, Ill.: Victor Books, 1989), 377. [14]A. N. Sherwin-White, "Pilate, Pontius," *The International Standard Bible Encyclopedia,* rev., gen. ed. Geoffrey W. Bromiley (Grand Rapids, Mich.: Wm. B. Eerdmans Publishing Co., 1986), 3:868. [15]Corley, 849. ಕೊರ್ಲಿ 1902ರಲ್ಲಿ ಸಾಹಿತ್ಯಕ್ಕಾಗಿ ನೋಬಲ್ ಬಹುಮಾನ ಗೆದ್ದಂತಹ ಜರ್ಮನ್‌ನ Theodor Mommsen ಮೂಲಕದ ಅಧ್ಯಯನ ಸೂಚಿಸುವವರಾಗಿದ್ದಾರೆ. Mommsen ರವರ ಚಿರಪರಿಚಿತವಾದ ಕಾರ್ಯವೆಂದರೆ *History of Roma* ನಾಲ್ಕು ಗ್ರಂಥಗಳೇ ಆಗಿವೆ. [16]Walter Wangerin, Jr., *The Book of God: The Bible as a Novel* (Grand Rapids, Mich.: Zondervan Publishing House, 1996), 796. [17]ಪಿಲಾತನಾದರೂ ಯೇಸುವನ್ನು ಬೇರೆಯಾದ ಸುರಕ್ಷತೆಯ ಸ್ವಾದೀನತೆಯಲ್ಲಿ ತೆಗೆದುಕೊಳ್ಳಬಹುದಿತ್ತು. [18]ಲೂಕ ಮತ್ತು ಯೋಹಾನನಲ್ಲಿ ಕೆಲ ಹೇಳಿಕೆಗಳು ಹೆಚ್ಚಾಗಿ ನಿಶ್ಚಿತವಾಗಿ

ಒಂದರ ಮೇಲೊಂದು ಇರುವುದಾಗಿದೆ, ಆದರೆ ನಾನು ಅವನು ಬೇರೆಬೇರೆಯಾಗಿ ಪಟ್ಟಿಮಾಡಿದ್ದೇನೆ. [19]"ವಿಪತ್ತು" ಎಂಬ ಪದವು ಅಪಾಯವನ್ನು ಅಥವಾ ನಾಶನವನ್ನು ಸೂಚಿಸುವುದಾಗಿದೆ. ಈ ವಿಚಾರಣೆಯ ಪ್ರಕರಣದಲ್ಲಿ, ಈ ಪದವು ಸಿದ್ಧಿಯ ಅಪಾಯವನ್ನು ಸೂಚಿಸುತ್ತಿದೆ. US, ನಲ್ಲಿ ದ್ವಿಪತ್ತಿನ ವಿರುದ್ಧದ ನಿಶೇಷವು ಸಂವಿಧಾನ ಐದನೆಯ ವಿಧಿಯಲ್ಲಿ ಮತ್ತು ಹೆಚ್ಚಿನ ರಾಜ್ಯದ ಸಂವಿಧಾನದ ಮೂಲಕ ಸುರಕ್ಷೆಯು ಒದಗಿಸಲ್ಪಟ್ಟಿದೆ. ಅನೇಕ ದೇಶಗಳು ಇದಕ್ಕೆ ಸಮಾನವಾದ ನ್ಯಾಯಬದ್ಧ ವ್ಯವಸ್ಥೆಯನ್ನು ಹೊಂದಿರುತ್ತವೆ. [20]ಯೆಹೂದಿಗಳೊಡನೆ ಪಿಲಾತನ ಸಲಿದಾದ ಸಂಬಂದವನ್ನು ನೀವು ಪುನರಾವರ್ತಸಬಹುದು.

[21]H. I. Hester, *The Heart of the New Testament* (Liberty, Mo.: Quality Press, 1963), 211. ಪಿಲಾತನು ಯೇಸುವನ್ನು ಕ್ರೂಜೆಗೆ ಹಾಕಲು ಒಪ್ಪಿಸಿಕೊಟ್ಟಾಗ ಇನ್ನೂ ಸುಮಾರು ಮುಂಜಾನೆ 6 ಗಂಫೆ ಆಗಿತ್ತು ಎಂಬ ಸತ್ಯಾಂಶವು ("ಎಲ್ಲರೂ ಉತ್ತರಿಸಲೇಬೇಕಾದ ಪ್ರಶ್ನೆ" ಎಂಬ ಪಾಠದಲ್ಲಿ ಸಿಕ್ಕುವ ಯೋಹಾನ 19:14 ಟಿಪ್ಪಣೆಯನ್ನು ನೋಡಿರಿ) ನಡೆಯುತ್ತಿದ್ದ ಎಲ್ಲ ಕಾರ್ಯಗಳು ಹುಚ್ಚುಹುಚ್ಚಾದಂತವು ಮತ್ತು ಅವರಸರದಿಂದ ಕೂಡಿದವು ಆಗಿದ್ದವು ಎಂದು ಸೂಚಿಸುವುದಾಗಿದೆ. [22]ಆತನ ವೈರಿಗಳು ಆತನ ವಿರುದ್ಧ "ಸುಳ್ಳು ಸಾಕ್ಷಿಗಳು" ಸೇರಿಸಿದರು ಎಂಬ ವಾಸ್ತವವು (ಮತ್ತಾಯ 26:59) ಆತನನ್ನು ದೂಷಿಸಲು ಯಾರೊಬ್ಬ ನಿಜವಾದ ಸಾಕ್ಷಿಯು ಸಿಕ್ಕಲಿಲ್ಲ ಎಂಬುದಕ್ಕೆ ಆಧಾರವಾಗಿದೆ. [23]ಯೇಸು ನಮ್ಮ ಪಾಪಗಳಿಗಾಗಿ ಸತ್ತದ್ದರಿಂದಾಗಿ (1 ಕೊರಿಂಥ 15:3), ಆತನು ನಮ್ಮೆಲ್ಲರ ಪಾಪಗಳಿಗೋಸ್ಕರ ಶಿಲುಬೆಯ ಮೇಲೆ ಇಡಲ್ಪಟ್ಟನು. ಇದು *ಕ್ರಿಸ್ತನ ಜೀವನ ಚರಿತ್ರೆ, 7ರಲ್ಲಿ* ಚರ್ಚಿಸಲ್ಪಟ್ಟಿದೆ. ಆ ಸಮಯದಲ್ಲಿ, ಈ ಪ್ರಸಂಗದಲ್ಲಿ, ಆತನ ವೈರಿಗಳ ಪಾಪಮಯತೆಯು ಸಮಾ ಲೋಚನೆಯ ಅಡಿಯಲ್ಲಿ ಇದೆ. [24]ಯೇಸುವಿನ ದಿವ್ಯತೆಯ ಬಗೆಗೆ ಆಧಾರಗಳನ್ನು ಸೇರಿಸುವ ಮೂಲಕ ವಿಚಾರಗಳನ್ನು ವಿಸ್ತರಿಸಬಹುದು. ಈ ಪ್ರಸಂಗದ ನಂತರದ ಸಿಕ್ಕುವ ಟಿಪ್ಪಣೆಗಳು ಭಾಗವನ್ನು ನೋಡಿರಿ. [25]Albert Simpson, "What Will You Do with Jesus?" *Songs of Faith and Praise*, comp. and ed. Alton H. Howard (West Monroe, La.: Howard Publishing Co., 1994). [26]ಈ ಪುಸ್ತಕದಲ್ಲಿ ನಂತರದಲ್ಲಿ "ಸಿಕ್ಕುವ ಪೊಂತೀಯ ಪಿಲಾತ (ಮತ್ತು ಯೇಸುವಿನ ಮರಣ)ದ" ಬಗೆಗೆ ಉಪಲೇಖನದಲ್ಲಿ ಹೆಚ್ಚಿನದು ಹೇಳಲ್ಪಟ್ಟಿದೆ.